**ಅಸಲು ದಾವಾ ನಂ. : 178/2013** **ಡಿಡಬ್ಲ್ಯೂ:1**

**(ಇಂದು ದಿನಾಂಕಃ 28-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಮುಂದುವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಸಿ ಎಂ ಸಿ ರವರಿಂದಃ**

ಈ ಪ್ರಕರಣದಲ್ಲಿ ನನಗೆ ನ್ಯಾಯಾಲಯದಿಂದ ಸಮನ್ಸ್ ನನಗೆ ಬಂಟೇನಹಳ್ಳಿ ನಿವಾಸಕ್ಕೆ ಬಂದಿರುತ್ತದೆ. 2ನೇ ಪ್ರತಿವಾದಿಗೂ ಕೂಡ ಅದೇ ವಿಳಾಸಕ್ಕೆ ಸಮನ್ಸ್ ಬಂದಿರುತ್ತದೆ. ನಮಗೆ ಸಮನ್ಸ್ ಅನ್ನು ಪೋಸ್ಟ್ ಮೂಲಕ ಬಂಟೇನಹಳ್ಳಿ ಗ್ರಾಮಕ್ಕೆ ಕಳುಹಿಸಿರುತ್ತಾರೆ. ಈ ದಾವೆಯನ್ನು ವಾದಿ ಬಂಟೇನಹಳ್ಳಿಯ ಗ್ರಾಮದಲ್ಲಿರುವ 6036 ಜಾಗ ಅದರಲ್ಲಿ 25*25 ಮನೆ ಇರುವ ಜಾಗಕ್ಕೆ ಸಂಬಂಧಪಟ್ಟಂತೆ ಹಾಕಿರುತ್ತಾರೆ. ದಾವಾ ಅಸ್ತಿ ನಿಮಗೆ ಬಂದಿದೆಯಾ ಎಂದರೆ ಸಾಕ್ಷಿಯು ನನ್ನ ಹೆಸರಿನಲ್ಲಿ ಇರುತ್ತದೆ, ನಮಗೆ ಬಂದಿರುತ್ತದೆ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನನ್ನ ಅಜ್ಜಿ ಸಿದ್ದಮ್ಮ ನನ್ನ ಹೆಸರಿಗೆ ವಿಲ್ ಬರೆದಿರುತ್ತಾರೆ. ನಿಡಿ-10 ಯಾರ ಹೆಸರಿಗೆ ಆಗಿದ ಹಕ್ಕುಪತ್ರ ಎಂದರೆ ಸಾಕ್ಷಿಯು ನನ್ನ ಹೆಂಡತಿಗೆ ಎಂದು ಉತ್ತರಿಸುತ್ತಾರೆ. ನಿಡಿ-10 ರಲ್ಲಿ ತೋರಿಸಿರುವ ಆಸ್ತಿ ಮತ್ತು ದಾವಾ ಅಸ್ತಿ ಒಂದೇ ಆಗಿರುತ್ತದೆ. ಯಾವ ದಿನಾಂಕದಂದು ನನ್ನ ಹೆಂಡತಿ ಹೆಸರಿಗೆ ಆಗಿದೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ, ಸಾಕ್ಷಿಗೆ ನಿಡಿ-10 ಅನ್ನು ತೋರಿಸಿ ಅದರಲ್ಲಿ ದಿಃ 18-09-2021 ಎಂದು ಇದೆ ಎಂದರೆ ಸಾಕ್ಷಿಯು ಅದು ಡಿಡಿ ಕಟ್ಟಿದ ದಿನಾಂಕ ಎಂದು ಉತ್ತರಿಸುತ್ತಾರೆ. ಡಿಡಿ ಕಟ್ಟಿರುವುದು ಯಾವ ದಿನಾಂಕದಂದು ನಮಗೆ ಮಂಜೂರಾಗಿದ್ದು ಅದಕ್ಕೆ ಸಂಬಂಧಪಟ್ಟಂತೆ ಕಟ್ಟಿರುತ್ತೇನೆ ಎಂದರೆ ಸರಿ. ಸದರಿ ಆಸ್ತಿಯನ್ನು ಯಾವ ಕಾರಣಕ್ಕೆ ಮಂಜೂರು ಮಾಡಿಕೊಡಬೇಕೆಂದು ಅರ್ಜಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಪಂಚಾಯ್ತಿ ಖಾತೆ ನನ್ನ ಹೆಸರಿನಲ್ಲಿ ಇತ್ತು, ರೆವಿನ್ಯೂ ಖಾತೆ ಆಗಿರಲಿಲ್ಲ, ಆ ಕಾರಣಕ್ಕೆ ಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ. ನನ್ನ ಹೆಸರಿನಲ್ಲಿದ್ದ ಖಾತೆಯಾಗಿದ್ದ ಆಸ್ತಿ

ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತದೆ. ನನ್ನ ಅಜ್ಜಿಯ ಮರಣ ಶಾಸನ ಪತ್ರದ ಆಧಾರದ ಮೇರೆಗೆ ನನ್ನ ಹೆಸರಿಗೆ ಪಂಚಾಯ್ತಿ ಖಾತೆ ಆಗಿದ್ದು, ಅದಕ್ಕೆ ಸಂಬಂಧಪಟ್ಟ ದಾಖಲೆಗಳು ಇರುತ್ತವೆ.

ನಿಡಿ–10 ಅನಧಿಕೃತವಾಗಿ ರೆವಿನ್ಯೂ ಜಾಗದಲ್ಲಿ ಸ್ವಾಧೀನದಲ್ಲಿ ಇರುವವರಿಗೆ ಕೊಡುವ ಹಕ್ಕುಪತ್ರ ಎಂದರೆ ಸರಿ. ನಾನು ನನ್ನ ಹೆಂಡತಿ ಹೆಸರಿಗೆ ದಾವಾ ಅಸ್ತಿಯನ್ನು ವರ್ಗಾವಣೆ ಮಾಡಿಕೊಳ್ಳಲು ಹಕ್ಕುಪತ್ರ ಆಗಿದೆ ಅದರ ಆಧಾರದ ಮೇಲೆ ಅರ್ಜಿ ಸಲ್ಲಿಸಿರುತ್ತೇನೆ. ದಾವಾ ಆಸ್ತಿಯ ಚಕ್ಕುಬಂದಿ ಏನು ಹಾಕಿದ್ದಾರೆ ಎಂದರೆ ಸಾಕ್ಷಿಯು ಪೂಃ ರಸ್ತೆ, ಪಃ ದಾಯಪ್ಪನ ಮನೆ, ಉಃ ಹನುಮಂತಪ್ಪನ ಮನೆ, ದಃ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ನಿಡಿ–10 ಕ್ಕೂ ಮತ್ತು ದಾವಾ ಅಸ್ತಿಗೂ ಒಂದೇ ಚಕ್ಕುಬಂದಿ ಇರುತ್ತದೆ ಎಂದರೆ ಸರಿ. ನಿಡಿ–10 ದಾವಾ ಹಾಕಿದ ನಂತರ ಆಗಿದೆ ಎಂದರೆ ಸರಿ. ನನ್ನ ಹೆಸರಿಗೆ ಇದ್ದದ್ದನ್ನು ನನ್ನ ಹೆಂಡತಿ ಹೆಸರಿಗೆ ಬದಲಾವಣೆ ಮಾಡಬೇಕು ಎಂದು ಅರ್ಜಿ ಕೊಟ್ಟಿದ್ದೆ ಎಂದು ಹೇಳಿದ್ದು ಸುಳ್ಳು, ನನ್ನ ಹೆಸರಿಗೆ ದಾಖಲೆಗಳು ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ–10 ಅನ್ನು ನಾನು ವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ತಾಯಿ ದಿಃ 25–11–2009 ರಲ್ಲಿ ನನಗೆ ಬರೆದುಕೊಟ್ಟಿದ್ದಾರೆ ಎಂದು ಹೇಳಲಾದ ಮರಣ ಶಾಸನ ಪತ್ರದಲ್ಲಿರುವ ಆಸ್ತಿಯ ಚಕ್ಕುಬಂದಿ ಮತ್ತು ನಿಡಿ–10 ರ ಚಕ್ಕುಬಂದಿ ಒಂದೇ ಇದೆ ಎಂದರೆ ಸರಿ. ಮರಣ ಶಾಸನ ಪತ್ರದಲ್ಲಿ ತೋರಿಸಿರುವ ಆಸ್ತಿ ವಾದಿಯ ತಾಯಿಗೆ ಸೇರಿದ್ದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಜ್ಜಿ ಸಿದ್ದಮ್ಮನಿಗೆ ಸೇರಿದ್ದು ಎಂದು ಉತ್ತರಿಸುತ್ತಾರೆ.

ನಾನು ಹೇಳುವ ಸಿದ್ದಮ್ಮ ವಾದಿಯ ತಾಯಿ ಎಂದರೆ ಸರಿಯಲ್ಲ. ನಿಡಿ–11 ರಲ್ಲಿ ತೋರಿಸಿರುವ ಸತ್ಯಮ್ಮ ಈ ಪ್ರಕರಣದ ವಾದಿ ಎಂದರೆ ಸರಿಯಲ್ಲ. ಅವರು ಯಾರು ಎಂದು ನನಗೆ ಗೊತ್ತಿಲ್ಲ. ಸತ್ಯಮ್ಮ ಮತ್ತು ಯಲ್ಲಮ್ಮ ಯಾರು ಎಂದು ನಾನು ವಿಚಾರ ಮಾಡಿರುವುದಿಲ್ಲ. ಸತ್ಯಮ್ಮನ ತಾಯಿಗೆ ಎಷ್ಟು ಜನ ಮಕ್ಕಳು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಈ ಪ್ರಕರಣ ದಾಖಲು ಮಾಡಿದ ನಂತರ ಇವರೆಲ್ಲ ಯಾರು ಎಂದು ನಾನು ವಿಚಾರ ಮಾಡಿರುವುದಿಲ್ಲ. ವಾದಿಯ ತಾಯಿ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ 2ನೇ ಪ್ರತಿವಾದಿಯ ಸಾಕು ತಾಯಿ ಸಿದ್ದಮ್ಮ ಎಂದು ಬರೆದಿರುತ್ತೇನೆ ಎಂದರೆ ಸಾಕ್ಷಿಯು ಸಾಕುತಾಯಿ ಅಲ್ಲ, ನಾನು ಆ ರೀತಿ ಬರೆದಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿರುವ ವಿಚಾರಗಳು ಸತ್ಯವಾಗಿರುತ್ತವೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನಾನು 2ನೇ ಪ್ರತಿವಾದಿಗೆ 5 ವರ್ಷ ಇದ್ದಾಗ ಸಾಕು ಮಗನಾಗಿ ಸ್ವೀಕರಿಸಿದ್ದರು ಎಂದು ಬರೆಸಿರುತ್ತೇನೆ ಎಂದರೆ ನನಗೆ ಈಗ ನೆನಪಿಲ್ಲ. ಸಾಕ್ಷಿಗೆ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ತೋರಿಸಿದ್ದು ಸಾಕ್ಷಿಯು ಅದನ್ನು ನೋಡಿ ಹೌದು ನಾನು ಆ ರೀತಿ ಬರೆಸಿರುತ್ತೇನೆ ಎಂದು ಉತ್ತರಿಸುತ್ತಾರೆ. ನಿಡಿ–11 ರಲ್ಲಿ ನನ್ನ ತಂದೆಯನ್ನು ಸಾಕುಮಗ ಎಂದು ಬರೆಸಿದ್ದಾರಾ ಅಥವಾ ಮಗ ಎಂದು ಬರೆಸಿದ್ದಾರಾ ಎಂದರೆ ಸಾಕ್ಷಿಯು ಮಗ ಎಂದು ಬರೆಸಿರುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ತಂದೆಗೆ ನಾಲ್ಕು ಜನ ಮಕ್ಕಳು ಇರುತ್ತಾರೆ. ಅವರೆಂದರೆ ಮಹೇಶ, ಯೋಗೇಶ, ಲತಾ ಮತ್ತು ದಿಲೀಪ್ ಕುಮಾರ್. ನನ್ನ ಅಜ್ಜನಿಗೆ ನನ್ನ ತಂದೆ ಒಬ್ಬನೇ ಮಗ. ನಮ್ಮ ಕುಟುಂಬದ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ನಿಡಿ–11 ರಲ್ಲಿರುವ ಹೆಬ್ಬೆಟ್ಟಿನ ಗುರುತು ವಾದಿಯ ತಾಯಿ ಸಿದ್ದಮ್ಮನ ಹೆಬ್ಬೆಟ್ಟಿನ ಗುರುತು ಅಲ್ಲ ಎಂದರೆ ಸಾಕ್ಷಿಯು ನನ್ನ ಅಜ್ಜಿ ಸಿದ್ದಮ್ಮರ ಹೆಬ್ಬೆಟ್ಟಿನ ಗುರುತು ಎಂದು ಉತ್ತರಿಸುತ್ತಾರೆ. ನಿಡಿ–11 ಅನ್ನು ಬರೆಯುವಾಗ ನೀವು ಇದ್ದೀರಾ ಎಂದರೆ ಸಾಕ್ಷಿಯು ನಾನು ಇರಲಿಲ್ಲ ಮತ್ತು ನನ್ನ ಸಮಕ್ಷಮ ಹೆಬ್ಬೆಟ್ಟು ಹಾಕಿರುವುದಿಲ್ಲ. ಸದರಿ ಪತ್ರವನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಯಾರು ಯಾರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮರಣ ಶಾಸನ ಪತ್ರದ ಮುಖಾಂತರ ನನ್ನ ಹೆಸರಿಗೆ ಖಾತೆ ಆಗಿರುವ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನನ್ನ ಹೆಂಡತಿ ಸದರಿ ಮನೆಯಲ್ಲಿ 15 ವರ್ಷಗಳಿಂದ ವಾಸವಾಗಿದ್ದಾಳೆ. ನಿಡಿ–12 ರಲ್ಲಿ ಇರುವ ಚಕ್ಕುಬಂದಿ ಮತ್ತು ದಾವಾ ಅಸ್ತಿಯ ಚಕ್ಕುಬಂದಿ ಒಂದೇ ಇದೆ ಎಂದರೆ ಸರಿ. ನಿಡಿ–10 ಹಕ್ಕುಪತ್ರದ ಪ್ರಕಾರ ನನ್ನ ಹೆಂಡತಿಯ ಹೆಸರಿಗೆ ಖಾತೆ ಆಗಿದೆ ಎಂದರೆ ಸಾಕ್ಷಿ ಅರ್ಜಿ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಸನಂ.102 ಕ್ಕೆ ಸಂಬಂಧಪಟ್ಟಂತೆ

ನನ್ನ ಹೆಂಡತಿಯ ಹೆಸರಿಗೆ ಹಕ್ಕುಪತ್ರ ಮಾಡಿರುತ್ತಾರೆ, ಖಾತೆ ಆಗಿರುವುದಿಲ್ಲ, ಅರ್ಜಿ ಕೊಟ್ಟಿರುತ್ತೇನೆ.

ವಾದಿಯ ತಾಯಿ ನನ್ನ ಹೆಸರಿಗೆ ಯಾವುದೇ ಮರಣ ಶಾಸನ ಪತ್ರ ಮಾಡಿಕೊಟ್ಟಿಲ್ಲ, ದಾವಾ ದಾಖಲು ಮಾಡಿದ ನಂತರ ಈ ದಾವೆ ನಮ್ಮ ಪರವಾಗಿ ಆಗಲ್ಲ ಎಂದು ನಿಡಿ-10 ಅನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಅಸ್ತಿಯಲ್ಲಿರುವ ಮನೆಯಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿದ್ದೇನೆ ಎಂದರೆ ಸಾಕ್ಷಿಯು ನಾನು ಹುಟ್ಟಿದಾಗಿನಿಂದಲೂ ಅಲ್ಲೇ ವಾಸವಾಗಿರುತ್ತೇನೆ ಎಂದು ಉತ್ತರಿಸುತ್ತಾರೆ.

ದಾವಾ ಅಸ್ತಿ ವಾದಿಯ ತಂದೆಗೆ ಸೇರಿದ ಆಸ್ತಿಯಾಗಿತ್ತು ಎಂದರೆ ಸಾಕ್ಷಿಯು ನಮ್ಮ ತಾತ ಗೋಪಾಲಜೋಗಿಯವರಿಗೆ ಸೇರಿದ್ದ ಆಸ್ತಿಯಾಗಿತ್ತು ಎಂದು ಉತ್ತರಿಸುತ್ತಾರೆ. ಗೋಪಾಲಜೋಗಿಯವರು ನನ್ನ ತಾತ ಅಲ್ಲ, ವಾದಿಯ ತಂದೆ ಎಂದರೆ ಸರಿಯಲ್ಲ. ವಾದಿಯ ತಂದೆ ಜೀವಂತವಾಗಿದ್ದಾಗ ಅವರು ಅನುಭವಿಸುತ್ತಿದ್ದರು, ನಂತರ ವಾದಿಯ ತಾಯಿ ಸದರಿ ಮನೆಯ ಅನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ. ನನ್ನ ತಾತ ಮತ್ತು ಅಜ್ಜಿ ಅನುಭವದಲ್ಲಿ ಇದ್ದರು ಎಂದು ಉತ್ತರಿಸುತ್ತಾರೆ. ಸಿದ್ದಮ್ಮನವರಿಗೆ ವಾದಿ ಒಬ್ಬರೇ ವಾರಸುದಾರರಾಗಿದ್ದರಿಂದ ದಾವಾ ಆಸ್ತಿ ವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ ದಾವಾ ಆಸ್ತಿಯ ಪಂಚಾಯ್ತಿ ದಾಖಲೆಗಳು ವಾದಿಯ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ದಾವಾ ಅಸ್ತಿಯ ಮನೆಯಲ್ಲಿ ವಾದಿ ವಾಸವಾಗಿದ್ದಾಗ ನಾವು ಅದರಲ್ಲಿ ಒಂದು ಕೊಠಡಿಯನ್ನು ಬಾಡಿಗೆಗೆ ಕೊಡಿ ಎಂದು ಕೇಳಿರುತ್ತೇವೆ ಎಂದರೆ ಸರಿಯಲ್ಲ. ಅವರು ಒಬ್ಬರೇ ಇದ್ದುದರಿಂದ ಅವರು ನಮಗೆ ಬಾಡಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿಃ 12-12-2011 ರಂದು ವಾದಿಯ ತಾಯಿ ಮೃತರಾದಳು ಎಂದರೆ ನನಗೆ ಗೊತ್ತಿಲ್ಲ. ಮೃತಳಾದ ನಂತರ ವಾದಿ ನಮಗೆ ಮನೆ ಖಾಲಿ ಮಾಡಿಕೊಡಿ ಎಂದು ಕೇಳಿದ್ದು ನಾವು ಒಂದು ವರ್ಷ ಕಾಲಾವಕಾಶ ಕೇಳಿರುತ್ತೇವೆ ಎಂದರೆ ಸರಿಯಲ್ಲ. ಒಂದು ವರ್ಷದ ನಂತರ ಕೇಳಿದಾಗ ಒಂದು ಮರಣ ಶಾಸನ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ತಾಯಿ ಅವಿದ್ಯಾವಂತಳಾದ್ದರಿಂದ ಅವರಿಗೆ

ಮೋಸ ಮಾಡುವ ಉದ್ದೇಶದಿಂದ ಅವರನ್ನು ಕರೆದುಕೊಂಡು ಹೋಗಿ ಮರಣ ಶಾಸನ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೋಸದಿಂದ ಮರಣ ಶಾಸನ ಪತ್ರವನ್ನು ಮಾಡಿಸಿ ಅದರ ಆಧಾರದ ಮೇಲೆ ಪಂಚಾಯ್ತಿಗೆ ಅರ್ಜಿ ಸಲ್ಲಿಸಿ ದಾವಾ ಅಸ್ತಿಯನ್ನು ನನ್ನ ಹೆಸರಿಗೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

ವಾದಿ ನಮಗೆ ವಕೀಲರ ಮುಖಾಂತರ ದಾವಾ ಆಸ್ತಿಯನ್ನು ಖಾಲಿ ಮಾಡಿಕೊಡಿ ಎಂದು ನೋಟೀಸ್ ನೀಡಿದ್ದರು ಎಂದರೆ ಸರಿಯಲ್ಲ. ನಾನು ನನ್ನ ವಕೀಲರಿಂದ ಸದರಿ ನೋಟೀಸ್ ಉತ್ತರ ಕೊಡಿಸಿರುವುದಿಲ್ಲ. ದಾವಾ ಆಸ್ತಿಯಲ್ಲಿ ನಾನು ಅಕ್ರಮವಾಗಿ ವಾಸವಾಗಿದ್ದೇನೆ, ನಾನು ಕಾನೂನು ಬದ್ಧ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಮರಣ ಶಾಸನ ಪತ್ರ ವಾದಿಯ ಹಕ್ಕಿಗೆ ಬದ್ದಪಡಿಸುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಸೇರಿದ ಆಸ್ತಿಯನ್ನು ನಾನು ಅಕ್ರಮವಾಗಿ ಸ್ವಾಧೀನದಲ್ಲಿ ಇರುವುದರಿಂದ ಅವರಿಗೆ ತಿಂಗಳಿಗೆ 500 ರೂ ಗಳಂತೆ ನಷ್ಟ ಪರಿಹಾರ ಕೊಡಬೇಕು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಯಾವುದೇ ದಾಖಲೆಗಳು ಕಾನೂನುಬದ್ದವಾಗಿಲ್ಲ ಎಂದರೆ ಸರಿಯಲ್ಲ. ಎಲ್ಲ ದಾಖಲೆಗಳನ್ನು ವಾದಿಗೆ ಸೇರಿದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:-- ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**